# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 964 /2020

**ಚಾಸಾ :- 05 / ಪ್ರಾಸಾ :- 03**

| | |
|---|---|
| ಹೆಸರು | ಕೆ ಎನ್ ನಾಗಭೂಷಣ |
| ತಂದೆ ಹೆಸರು | ನಾರಾಯಣ ಸ್ವಾಮಿ |
| ವಯಸ್ಸು | 62 |
| ಉದ್ಯೋಗ | ನಿವೃತ್ತ ಅಬಕಾರಿ ಉಪನಿರೀಕ್ಷಕರು |
| ವಿಳಾಸ | ಬೆಂಗಳೂರು |

**ದಿನಾಂಕ: 16-11-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

2005 ರಿಂದ 2012 ರವರೆಗೆ ಅಬಕಾರಿ ರಕ್ಷಕಾನಾಗಿ ಹಾಗೂ 2012 ರಿಂದ 2020 ರವರೆಗೆ ಅಬಕಾರಿ ಉಪನಿರೀಕ್ಷಕಾರಾಗಿ ರಾಜ್ಯ ವಿಚಕ್ಷಣ ದಳ, ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16.01.2020 ರಂದು ಬೆಳಿಗ್ಗೆ 8.45 ಗಂಟೆ ಸಮಯದಲ್ಲಿ ಅಬಕಾರಿ ಜಂಟಿ ಆಯುಕ್ತರ ಆದೇಶದ ಮೇರೆಗೆ ರಾಜ್ಯ ವಿಚಕ್ಷಣ ದಳ , ಬೆಂಗಳೂರು, ಅಬಕಾರಿ ಉಪಅಧೀಕ್ಷಕರ ಮಾರ್ಗದರ್ಶನದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಸಿಬ್ಬಂದಿಯೊಂದಿಗೆ ಸರ್ಕಾರಿ ವಾಹನ ಸಂಖ್ಯೆ ಕೆಎ 01 ಜಿ 6019 ರಲ್ಲಿ ತಾವರೆಕೆರೆ ನೆಲಮಂಗಲ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಬಂದ ಖಚಿತಿ ಮಾಹಿತಿ ಮೇರೆಗೆ ತಾವರೆಕೆರೆ ಕಡೆಯಿಂದ ಒಂದು ದ್ವಿಚಕ್ರ ವಾಹನದಲ್ಲಿ ಸೇಂದಿಯನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂಬ

ಮಾಹಿತಿ ಮೇರೆಗೆ ಮೇಟಿಹಳ್ಳಿ ಬಸ್ ನಿಲ್ದಾಣದ ಹತ್ತಿರ ಇಬ್ಬರು ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಅಕ್ರಮವಾಗಿ ಸೇಂದಿಯನ್ನು ಸಾಗಾಣಿಕೆ ಮಾಡುತ್ತಿದ್ದಾರೆ, ಆದಕಾರಣ ತಾವುಗಳು ಪಂಚರಾಗಿ ಬರಬೇಕು ಎಂದು ಕೇಳಿಕೊಂಡ ಮೇರೆಗೆ ಶಶಾಂಕ್ ಮತ್ತು ಯೋಗೇಶ್ ರವರು ಪಂಚರಾಗಿ ಬರಲು ಒಪ್ಪಿಕೊಂಡ ನಂತರ ಸದರಿಯವರಿಗೆ ನೋಟೀಸ್ ಕೊಟ್ಟು ಸಹಿಯನ್ನು ಪಡೆದು ಅಂಬೇಡ್ಕರ್ ಭವನದ ಹತ್ತಿರ ಗಸ್ತು ಮಾಡುತ್ತಿರುವಾಗ ತಾವರೆಕೆರೆ ಕಡೆಯಿಂದ ಒಂದು ಟಿ ವಿ ಎಸ್ ವಾಹನ ಬಂದಿದ್ದು ಅದನ್ನು ತಡೆದು ನಿಲ್ಲಿಸಿದಾಗ ಸದರಿ ವಾಹನದಕೂತುಕೊಳ್ಳುವ ಮುಂಭಾಗದ ಒಂದು ಪ್ಲಾಸ್ಟಿಕ್ ಚೀಲ ಹಾಗೂ 20 ಲೀಟರ್ ನೀರಿನ ಸಾಮರ್ಥ್ಯದ ಒಂದು ಕ್ಯಾನ್ ಇತ್ತು. ಶೋಧನೆ ಮಾಡಲು ನ್ಯಾಯಾಲಯದಿಂದ ಶೋಧನಾ ವರೆಂಟ್ ತರಲು ಕಾಲಾವಕಾಶ ಇಲ್ಲದ ಕಾರಣ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಪಂಚರ ಸಹಿಯನ್ನು ಪಡೆದು ಶೋಧನೆ ಮಾಡಿದಾಗ ಟಿ ವಿ ಎಸ್ 50 ನಂ.ಕೆಎ 02 ಕ್ಯೂ 8969 ಇದ್ದು ನಂತರ ಬ್ಯಾಗಿನಲ್ಲಿ ಶೋಧನೆ ಮಾಡಿದಾಗ 2 ಲೀಟರ್ ಸಾಮರ್ಥ್ಯದ 7 ಪ್ಲಾಸ್ಟಿಕ್ ಬಾಟಲುಗಳು ಇದ್ದವು, ಅದರಲ್ಲಿ ಬಿಳಿಯ ದ್ರವ್ಯ ಇದ್ದು ಹಾಗೂ 20 ಲೀಟರ್ ಸಾಮರ್ಥ್ಯದ ಕ್ಯಾನಿನಲ್ಲಿ ಬಿಳಿ ದ್ರವ್ಯ ಇತ್ತು . ಮುಚ್ಚಿದ ಬಾಟಲಿಯನ್ನು ಬಿಚ್ಚಿ ವಾಸನೆ ನೋಡಿದಾಗ ಉಳಿಯ ವಾಸನೆ ಬರುತ್ತಿತ್ತು. ಅದನ್ನು ಏನು ಎಂದು ಕೇಳಿದಾಗ ಶೇಂಧಿ ಎಂದು ತಿಳಿಸಿದನು. ಅದನು ತೆಗೆದುಕೊಂಡು ಹೋಗಲು ಏನಾದರೂ ಪರವಾನಗಿ ಇದೆಯೇ ಎಂದು ಕೇಳಿದಾಗ ಆತನು ಇಲ್ಲ ಎಂದು ಹೇಳಿರುತ್ತಾರೆ. ಒಟ್ಟು 7 ಬಾಟಲುಗಳಿಂದ 14 ಲೀಟರ್ ಶೆಂಧಿ ಹಾಗೂ 20 ಲೀಟರ್ ನೀರಿನ ಕ್ಯಾನ್ ನಲ್ಲಿ 20 ಲೀಟರ್ ಶೇಂಧಿ ಹೀಗೆ ಒಟ್ಟು 34 ಲೀಟರ್ ಶೇಂಧಿ ಇತ್ತು. ಅದರಲ್ಲಿ 1 ಲೀಟರ್ ಸಾಮರ್ಥ್ಯದ ಪ್ಯಾಸ್ಟಿಕ್ ಬಾಟೆಲಿನಲ್ಲಿ 2 ಲೀಟರ್ ಅನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಕಾಲಿ ಬಾಟೆಲಿಗೆ ಶೇಂಧಿಯನ್ನು ತುಂಬಿ ಬಿರಟೆಯನ್ನು ಮುಚ್ಚಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಹರಗನ್ನು ಹಾಕಿ ಇಲಾಖಾ ಸೀಲಿನಿಂದ ಸೀಲನ್ನು ಮಾಡಲಾಯಿತು. ನಂತರ ಮಾದರಿ ಚೀಟಿಯ ವಿವರಗಳನ್ನು ಬರೆದು ಪಂಚರ ಸಹಿಯನ್ನು ಪಡೆದು

ಬಾಟಲಿನ ಮೇಲೆ ಅಂಟಿಸಲಾಯಿತು. ನಂತರ ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತನು ತನ್ನ ಹೆಸರು ವೆಂಕಟಸ್ವಾಮಿ ಬಿನ್ ಸಿದ್ದಪ್ಪ , 64 ವರ್ಷ ವಯಸ್ಸು, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಚಿಕ್ಕಗೊಲ್ಲರಹಟ್ಟಿಯಲ್ಲಿರುವ ರಾಮಣ್ಣನವರ ಮನೆಯಲ್ಲಿ, ವಾಸ ಎಂದು ತಿಳಿಸಿದನು. ಖಾಯಂ ವಿಳಾಸ ಚಲ್ಲಾಪುರ, ಈಡಿಗರಹಟ್ಟಿ , ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ ಎಂದು ತಿಳಿಸಿದನು. ನಂತರ ದೊರೆತ ಶೇಂಧಿಯನ್ನು ಹಾಗೂ ದ್ವಿಚಕ್ರ ವಾಹನವನ್ನು ಇಲಾಖಾ ವಶಕ್ಕೆ ಜಪ್ತಿ ಪಡಿಸಿಕೊಳ್ಳಲಾಯಿತು. ನಂತರ ಆರೋಪಿಗೆ ಈ ರೀತಿ ಅಕ್ರಮವಾಗಿ ಶೇಂಧಿಯನ್ನು ತೆಗೆದುಕೊಂಡು ಹೋಗುವುದು ಶಿಕ್ಷಾರ್ಹ ಅಪಾರಧ ಎಂದು ತಿಳಿಸಿ ಆತನ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಮಹಜರನ್ನು ರಾತ್ರಿ 8.45 ರಿಂದ 9.30 ರವರೆಗೆ ಜರುಗಿಸಲಾಯಿತು.

ಈಗ ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಗಿ ಅದರಲ್ಲಿನ ತಮಂ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ವಾಹನವನ್ನು ಹಾಗೂ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಆರೋಪಿ ನ್ಯಾಯಾಲಯದಲ್ಲಿ ಹಾಜರು ಇದ್ದಾರೆ. ರಾಸಾಯನಿಕ ಪರೀಕ್ಷೆಗಾಗಿ ತೆಗೆದ ಮಾದರಿ ಶೇಂಧಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ಈ ಗ ಸಾಕ್ಷಿಗೆ ಶೋಧನಾ ಸಮುಚಿತ ವಾರೆಂಟ್ ಅನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಶೋಧನಾ ಸಮುಚಿತ ವಾರೆಂಟ್ ಅನ್ನು ನಿಪಿ -2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪಂಚರಿಗೆ ನೀಡಿದ ನೋಟಿಸುಗಳನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು ನಿಪಿಪಿ-4 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸರ್ಕಾರದ ತರ್ಫೆ ಪಿರ್ಯಾದಿಯನ್ನು

ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿಯನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಲಿಸ್ಟ್ ಆಫ್ ಆರ್ಟಿಕಲ್ಸ್ ಅನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿಯನ್ನು ನಿಪಿ-6 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮಾದರಿ ಸೀಲಿನ ನಕಲುಗಳನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದರಿಯನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಈಗಸಾಕ್ಷಿಗೆ ಪ್ರಥಮ ವರ್ತಮಾನ ವರಧಿಯನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪ್ರಥಮ ವರ್ತಮಾನ ವರಧಿಯನ್ನು ನಿಪಿ-8 ಎಂದು ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಸಿ ಎನ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

?ದಸ್ತಗಿರಿ ಮಾಡುವ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನಾನು, ಅಬಕಾರಿ ರಕ್ಷಕಾರು ಹಾಗೂ ಪಂಚರು ಇದ್ದರು ಎಂದು ನುಡಿಯುತ್ತಾರೆ. ನಿಮಗೆ ಮಾಹಿತಿ ಬಂದಾಗ ಎಲ್ಲಿ ಇದ್ದಿರಿ ಎಂದರೆ ಸಾಕ್ಷಿ ನೆಲಮಂಗಲ ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದೆನು ಎಂದು ನುಡಿಯುತ್ತಾರೆ. ಮಾಹಿತಿಯನ್ನು ಎಷ್ಟು ಗಂಟೆಗೆ ನೀಡಿರುತ್ತಾರೆ ಎಂದರೆ ಸಾಕ್ಷಿ 8.00 ಗಂಟೆಗೆ ಎಂದು ನುಡಿಯುತ್ತಾರೆ. ಪಂಚರಿಗೆ ಎಷ್ಟು ಗಂಟೆಗೆ ನೋಟೀಸನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ 8.30 ಗಂಟೆಗೆ ಎಂದು ನುಡಿಯುತ್ತಾರೆ. ಸದರಿ ಪಂಚರನ್ನು ಎಷ್ಟು ಗಂಟೆಗೆ ಬೇಟಿ ಆಗಿರುತ್ತೀರಿ ಎಂದರೆ ಸಾಕ್ಷಿ 7.45 ಗಂಟೆಗೆ ಎಂದು ನುಡಿಯುತ್ತಾರೆ. ನೋಟೀಸಿನಲ್ಲಿ ಪಂಚರನ್ನು 7.45 ಗಂಟೆಗೆ ಬೇಟಿ ಮಾಡಿರುತ್ತೇವೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು

ಎಂದು ನುಡಿಯುತ್ತಾರೆ. ಯೋಗಿಶ್ ಮತ್ತು ಶಶಾಂಕ್ ರವರನ್ನು ನೀವು ಪರಿಚಯ ಮಾಡಿಕೊಂಡಿರುವುದಿಲ್ಲ ಸುಳ್ಳು ನೋಟೀಸನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಪಂಚರಿಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ , ಸುಳ್ಳಾಗಿ ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಎಲ್ಲಿ ತಪಾಸಣೆಯನ್ನು ಮಾಡುತ್ತಿದ್ದಿರಿ ಎಂದರೆ ಸಾಕ್ಷಿ ತಾವರೆಕೆರೆಯಿಂದ 4 ಕಿ.ಮೀ. ದಲ್ಲಿರುವ ಅಂಬೇಡ್ಕರ್ ಭವನ ಎಂದು ನುಡಿಯುತ್ತಾರೆ. ದ್ವಿಚಕ್ರ ವಾಹನವನ್ನು ಜಪ್ತಿ ಪಡಿಸಿಕೊಂಡಿರುತ್ತೇವೆ ಎಂದು ಹೇಳಿದ್ದು ಆ ಸಂಬಂಧ ಪೋಟೋಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂರದೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದ್ವಿಚಕ್ರ ವಾಹನದ ಮಾಲೀಕರು ಯಾರು ಎಂದು ತಪಾಸಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನದ ಮಾಲೀಕರು ಯಾರು ಎಂದು ತಪಾಸಣೆ ಮಾಡದೆ ಎಫ್ ಐ ಆರ್ ಮಾಡಿರುತ್ತೀರಿ ಎಂದರೆ ಸಾಕ್ಷಿ ವಾಹನದ ಸಂಖ್ಯೆಯ ಮೇಲೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಯಾರು ಮಾಲೀಕರು ಎಂದು ತಿಳಿದುಕೊಳ್ಳದೆ , ಯಾರೋ ಚಲಾಯಿಸುತ್ತಿದ್ದ ವಾಹನದ ಮೇಲೆ ಆರೋಪಿಯ ವಿರುದ್ದ ಸುಳ್ಳು ಆಪಾದನೆ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಜಪ್ತಿ ಪಡಿಸಿಕೊಂಡ 7 ಕ್ಯಾನುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 16 ಲೀಟರ್ ಹಾಗೂ 20 ಲೀಟರ್ ಸಾಮರ್ಥ್ಯದ ಕ್ಯಾನುಗಳನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ ಎಂದು ಹೇಳಿದ್ದು ಸದರಿ ಕ್ಯಾನುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಸಂಬಂಧಪಟ್ಟ ರೇಂಜ್ ಗೆ ವಹಿಸಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಯಾವುದೇ ವಸ್ತು ಗಳನ್ನು ಜಪ್ತಿ ಪಡಿಸಿಕೊಂಡರೆ ಎಲ್ಲಾ ವಸ್ತುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಎಲ್ಲಾ ಕಡೆ ದೊರಕುತ್ತದೆ ಎಂದರೆ ಸಾಕ್ಷಿ

ಹೌದು ಎಂದು ನುಡಿಯುತ್ತಾರೆ. ಈ ಕೇಸಿಗೋಸ್ಕರ ಮುದ್ದೆಮಾಲು 1 ಅನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನೀವು ಗಸ್ತು ಮಾಡುತ್ತಿರುವಾಗ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡರೆ ಅದನ್ನು ನಿಮ್ಮ ಮೇಲಾಧಿಕಾರಿಗಳಿಗೆ ವರಧಿಯನ್ನು ಕೊಡಬೇಕು ಎಂದರೆ ಸಾಕ್ಷಿ ಫೋನ್ ನ ಮೂಲಕ ವರಧಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ನಿಮ್ಮ ಮೇಲಾಧಿಕಾರಿಯವರಿಗೆ ಸಹಾಯ ಮಾಡಲು ಸುಳ್ಳು ವರಧಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ರಾಜ್ಯ ವಿಚಕ್ಷಣ ದಳ ನಿಮಗೆ ಯಾವುದೇ ಮಾಹಿತಿಯನ್ನು ಕೊಟ್ಟಿರುವುದಿಲ್ಲ ಆದರೂ ಒಂದು ಸುಳ್ಳು ಎಫ್ ?ಐ ಆರ್ ಅನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ಕೊಡಬೇಕೆಂಬ ಉದ್ದೇಶದಿಂದ ಒಂದು ಸುಳ್ಳು ಎಫ್ ?ಐ ಆರ್ ಅನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ರಾಸಾಯನಿಕ ಪರೀಕ್ಷೆಗೆ ಯಾವುದೇ ವಸ್ತುವನ್ನು ಕೊಟ್ಟಿರುವುದಿಲ್ಲ ಸುಳ್ಳು ವರಧಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಮಹಜರ್ ಗೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಶಶಾಂಕ್, ಯೋಗೇಶ್ ,ಸೂರ್ಯನಾರಾಯಣಗೌಡ ಹಾಗೂ ಇನ್ನೊಬ್ಬರು ಮಾಡಿರುತ್ತಾರೆ ನೆನಪು ಇರುವುದಿಲ್ಲವೆಂದು ನುಡಿಯುತ್ತಾರೆ. ಮಹಜರನ್ನು ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಘಟನಾ ಸ್ಥಳದಲ್ಲಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಮಹಜರನ್ನು ನೀವು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚೆಕ್ಕುಬಂಧಿ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಬರುತ್ತದೆ ಎಂದು

ನುಡಿಯುತ್ತಾರೆ, ಪೂರ್ವಕ್ಕೆ ಅಂಬೇಡ್ಕರ್ ಭವನ, ಪಶ್ಚಿಮಕ್ಕೆ ಆಶಿರ್ವಾದ್ ರೆಸಿಡೆನ್ಸಿ ರವರಿಗೆ ಸೇರಿದ ಸೈಟ್ , ಉತ್ತರಕ್ಕೆ ನೆಲಮಂಗಲ ತಾವರೆಕೆರೆ ರಸ್ತೆ. ದಕ್ಷಿಣಕ್ಕೆ ನೆಲಮಂಗಲ ತಾವರೆಕೆರೆ ರಸ್ತೆ ಎಂದು ನುಡಿಯುತ್ತಾರೆ. ಈ ಕೇಸಿಗೋಸ್ಕರ ಸುಳ್ಳು ಚೆಕ್ಕುಬಂಧಿಯನ್ನು ನಮೂದಿಸಿ ಸುಳ್ಳು ಆರೋಪ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎಲ್ಲೋ ಬೇರೆ ಕಡೆ ದೊರೆತ ಪ್ಲಾಸ್ಟಿಕ್ ಕ್ಯಾನುಗಳನ್ನು ಇಟ್ಟುಕೊಂಡು ಸುಳ್ಳು ವರಧಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮಾದರಿ ಸೀಲುಗಳನ್ನು ಯಾರು ಮಾಡಿದ್ದು ಎಂದರೆ ಸಾಕ್ಷಿ ನಾನೇ ಎಂದು ನುಡಿಯುತ್ತಾರೆ. ಈ ಕೇಸಿಗೋಸ್ಕರ ಮಾದರಿ ಸೀಲುಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಸರಿಯಾಗಿ ತನಿಖೆ ಮಾಡದೆ ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಎಫ್ ಐ ಆರ್ ಅನ್ನು ದಾಖಲಿಸಿ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ಅಪರಾಧ ಮಾಡದೇ ಇದ್ದರೂ ನೀವು ಸುಳ್ಳು ಎಫ್ ಐ ಆರ್ ದಾಖಲಿಸಿ ಸುಳ್ಳು ವರಧಿಯನ್ನು ಸ ಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**